**<u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**<u>ಸಿ.ಸಿ ಸಂಖ್ಯೆ:3643/2022</u>**

**ಸಾಕ್ಷಿಯನ್ನು ದಿಃ 11.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | |
|---|---|
| ಹೆಸರು | ಸಂದೀಪ್ ಕುಮಾರ್ |
| ತಂದೆಯ ಹೆಸರು | ಕುಳ್ಳೇಗೌಡ |
| ವಯಸ್ಸು | 33 ವರ್ಷ |
| ಉದ್ಯೋಗ | ಪೋಸ್ಟ್‌ಮಾಸ್ಟರ್ |
| ವಾಸಸ್ಥಳ | ಕುಡಿನೀರುಮುದ್ದನಹಳ್ಳಿ, ಹುಣಸೂರು. |

**<u>ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ ಎಂ.ಈ.ಪಿ. ವಕೀಲರಿಂದಃ</u>**

ನಾನು ಪೋಸ್ಟ ಮ್ಯಾನ್ ಆಗಿ ಸಿ.ಬಿ.ಟಿ ಕಾಲೋನಿಯಲ್ಲಿ 2016 ರಿಂದ 2024 ರ ಜೂನ್ ವರೆಗೆ ಕೆಲಸ ಮಾಡಿರುತ್ತೇನೆ. ನಿಪಿ. 5(ಎ) ರ ಅಂಚೆ ಲಕೋಟೆ ಮೇಲಿನ ಅಡ್ರೆಸ್ ನನಗೆ ಗೊತ್ತು. ದಿಃ 08.10.2022 ರಂದು ಕಳುಹಿಸಿದ ರಿಜಿಸ್ಟರ್ ಪೋಸ್ಟ ನಮ್ಮ ಸಿ.ಬಿ.ಟಿ ಕಾಲೋನಿಗೆ ಬಂದು ತಲುಪಿದ್ದು, ದಿಃ 10.10.2022 ರಂದು. ಸದರಿ ರಿಜಿಸ್ಟರ್ ಪೋಸ್ಟ್ ಬಂದ ನಂತರ ಅದನ್ನು ತೆಗೆದುಕೊಂಡು ವಿನೋಬಾ ಕಾಲೋನಿಯ ವೆಂಕಟಪತಿ ಪಿ. ವೆಂಕಟಯ್ಯ ರವರ ಮನೆಗೆ ಹೋಗಿದ್ದು, ಪಾರ್ಟಿ ಸಿಗಲಿಲ್ಲ ಮನೆಯವರಿಗೆ ಹೇಳಿ ಬಂದಿದ್ದೇವು. 7 ದಿನ ಹೋದರು ಸದರಿ ಪಾರ್ಟಿ ಇರಲಿಲ್ಲ . ಸದರಿ ರಜಿಸ್ಟರ್ ಪೋಸ್ಟ್ ಜೊತೆಗೆ ಆರ್ಡಿನರಿ ಪೋಸ್ಟ್ ಬಂದಿದ್ದು, ಅದನ್ನು ಮನೆಯವರ ಬಳಿ ಕೊಟ್ಟು ಬಂದಿದ್ದೇವು. 7 ದಿನಗಳ ಕಾಲ ಪಾರಿಟಿ ಸಿಗದ ಕಾರಣ ರಿಜಿಸ್ಟರ್ ಪೋಸ್ಟ್ ಅವನ್ನು ವಾಪಸ್ಸು ಕಳುಹಿಸಿರುತ್ತೇನೆ. ನಿಪಿ. 5 ರ

ಮೇಲಿನ ಶರಾ ನನ್ನ ಬರಣಿಗೆಯಲ್ಲೆ ಇದ್ದು, ಸದರಿ ಶರಾ ದ ಭಾಗವನ್ನು ನಿಪಿ. 5(ಬಿ) ಎಂದು ಗುರುತಿಸಲಾಯಿತು.

ದಿಃ 10.10.2022 ರಿಂದ 17.10.2022 ರ ವರೆಗೆ ಸತತವಾಗಿ 7 ದಿನಗಳ ಕಾಲ ಅವರ ಮನೆಗೆ ಹೋಗಿದ್ದು, ಸದರಿ ಲಕೋಟೆ ಮೇಲಿನ ದಿನಾಂಕವನ್ನು ನಾನೆ ಬರೆದಿರುತ್ತೇನೆ. ಅವುಗಳು ನನ್ನ ಬರವಣಿಗೆಯಲ್ಲೆ ಇರುತ್ತವೆ. RPAD Register post ತೆಗೆದುಕೊಂಡು ಬಂದ ಡಿಲವರಿ ಮೆನಿಫೆಸ್ಟ ಆಫ್ ರತ್ನಾಪುರಿ ಪೋಸ್ಟ್ ದಾಖಲೆಯ ದೃಡೀಕೃತ ಪ್ರತಿಯನ್ನು ನಿಪಿ. 12 ಎಂದು ಗುರುತಿಸಲಾಯಿತು. (**ಅಸಲು ಪ್ರತಿಯನ್ನು ನೋಡಿ ಹಿಂದಿರುಗಿಸಲಾಯಿತು.**) ಬ್ಯಾಂಚ್ ಆಫೀಸು ದಿನಚರಿ ಪುಸ್ತಕವನ್ನು ಹಾಜರು ಪಡಿಸಿದ್ದು ಅದನ್ನು ನೋಡಿ ಹಿಂದಿರುಗಿಸಲಾಗಿದೆ. ದಿಃ 10.10.2022 ರಿಂದ 17.10.2022 ರ ವರೆಗಿನ ಎಂಟ್ರಿಯ ದೃಡೀಕೃತ ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ. 13 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಬ್ರ್ಯಾಂಚ್ ಪೋಸ್ಟರ್ ಮಾಸ್ಟರ್ ಸಹಿ ಹಾಕಿರುತ್ತಾರೆ. ನಿಪಿ. 12 ಮತ್ತು 13 ರ ದಾಖಲೆಗಳನ್ನು ಪೋಸ್ಟ್ ಮಾಸ್ಟರ್ ಚೆಕ್ ಮಾಡಿ ಸಹಿ ಮಾಡಿ ಸೀಲು ಸಹ ಹಾಕಿರುತ್ತಾರೆ.

**<u>ಪಾಟೀಸವಾಲುಃ– ಆರೋಪಿ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದಃ</u>**

ನಾನು ಅಂಚೆ ಇಲಾಖೆಗೆ ನೇಮಕ ಅದನಂತರ ಯಾವುದೆ ಅಂಚೆ ನೌಕರರಿಗೆ RPAD ಜಾರಿ ಮಾಡಲು ಹೋದಾಗ ಶರಾ ಕಡೆ ಸಹಿ ಮಾಡಿ ದಿನಾಂಕ ನಮೂದಿಸಬೇಕಾಗುತ್ತದೆ ಎಂಬ ನಿಯಮ ಇದೆ ಎಂದರೆ ಸರಿಯಲ್ಲ. ನಿಪಿ. 5 ರಲ್ಲಿ ಶರಾ ಬರೆದಿದ್ದಕ್ಕೆ ಸಹಿ ಹಾಕಬೇಕೆಂಬ ನಿಯಮ ಇದೆ ಎಂದರೆ ಸರಿ. ನಿಪಿ. 5 ರಲ್ಲಿ ನನ್ನ ಸಹಿ ಇಲ್ಲ ಎಂದರೆ ಸರಿ. ಅಂಚೆ ಇಲಾಖೆಯ ನಿಯಮಾನುಸಾರ ಅಂಚೆ ಕೊನೆಗೆ ದಿನ ದಿನಾಂಕ ಮತ್ತು ಸಮಯ ನಮೂದಿಸಿ ಸಹಿ ಹಾಕಬೇಕಾಗುತ್ತದೆ ಎಂದರೆ ಸಮಯ ಹಾಕಬೇಕೆಂಬ ನಿಯಮ ಇಲ್ಲ ಸಹಿ ಮತ್ತು ದಿನಾಂಕ ನಮೂದಿಸಬೇಕಾಗುತ್ತದೆ. ನಿಪಿ. 5 ರಲ್ಲಿ ಕೆಲಸದ ಅಭಾವನಿಂದ ಸೀಲು ಹಾಕುವುದು ಮಿಸ್ ಆಗಿರುತ್ತದೆ ಎನ್ನುತ್ತಾರೆ. ನಿಪಿ. 5 (ಬಿ) ಬರವಣಿಗೆ ನನ್ನದಲ್ಲ ಎಂದರೆ ಸರಿಯಲ್ಲ.

ನಾನು ಸಹಿ ಹಾಕದ ಕಾರಣ ನಿಪಿ. 5 ರಲ್ಲಿ ಇರುವ ಬರವಣಿಗೆ ನನ್ನದೆ ಎಂದು ಹೇಳಲು ಪೋಸ್ಟ ಮಾಸ್ಟರ್ ಒಬ್ಬರೆ ಸೂಕ್ತ ವ್ಯಕ್ತಿ ಎಂದರೆ ಸರಿಯಲ್ಲ.

ನಾನು ಪಿ.ಯು.ಸಿ ವರೆಗೂ ಓದಿರುತ್ತೇನೆ. ಕನ್ನಡ ಓದಲು ಬರೆಯಲು ಸೂಲಲಿತವಾಗಿ ಬರುತ್ತದೆ. ನಿಪಿ. 5(ಬಿ) ಯ ಶರಾದಲ್ಲಿ ಸಿಗದ ಕಾರಣ ಎಂದು ಬರೆಯುವ ಬದಲಾಗಿ ಸಿಗ್ಗದ ಕಾರಣ ಎಂದು ಬರೆಯಲಾಗಿದೆ ಎಂದರೆ ಸಿಗದ ಕಾರಣ ಎಂತಲೆ ಬರೆದಿರುತ್ತೇನೆ ಎನ್ನುತ್ತಾರೆ. ನಿಪಿ. 5(ಬಿ) ಶರಾವನ್ನು ನಾನು ಬರೆದಿದ್ದಲ್ಲ ನಮ್ಮ ಇಲಾಖೆಯವರು ಬರೆದಿದ್ದಲ್ಲ ಎಂದರೆ ಸರಿಯಲ್ಲ. ನಿಪಿ. 5 ರ ಬರವಣಿಗೆ ನನ್ನದೆ ಎಂದು ಸಾಬೀತು ಪಡಿಸಲು ನಮ್ಮ ಪೋಸ್ಟ್ ಮಾಸ್ಟರ್ ಅನ್ನು ಕರೆಸಲು ತೊಂದರೆ ಇಲ್ಲ ಎಂದರೆ ಅವರು ಬ್ಯೂಸಿ ಇರುತ್ತಾರೆ, ಅವರು ಹ್ಯಾಂಡಿ ಕ್ಯಾಪ್ಟ್ ಇದ್ದು ಅವರನ್ನು ಕರೆಸಲು ಆಗುವುದಿಲ್ಲ ಎನ್ನುತ್ತಾರೆ.

ನಿಪಿ. 5 ರಲ್ಲಿ Intimation delivered ಎಂದು ಬರೆದಿದ್ದಿರಾ ಎಂದರೆ ಪಾರ್ಟಿ ಇಲ್ಲದಿದ್ದಾಗ Not in Station ಎಂದೆ ಬರೆಯಲಾಗುತ್ತದೆ ಎನ್ನುತ್ತಾರೆ. RPAD ಬಂದರೆ Intimation delivered ಮಾಡಲಾಗುತ್ತದೆ ಎಂದರೆ ಡೋರ್ ಗೆ ಹಾಕಿ ಬಂದಿದ್ದೆ ಎಂದು ನುಡಿಯುತ್ತಾರೆ. Intimation delivered (ID) ಎಂದು ನಮೂದಿಸುವ ನಿಯಮ ಇದೆ ಎಂದರೆ ಸರಿಯಲ್ಲ. ಈ ಕೇಸ್ ನಲ್ಲಿ Intimation delivered ಎಂದು ತೋರಿಸಲು ಏನು ದಾಖಲೆ ಇದೆ ಎಂದರೆ ಒಂದೇ ದಾಖಲೆ ಇದ್ದು ಅದನ್ನು ಡೋರ್ ಗೆ ಹಾಕಿ ಬಂದಿರುತ್ತೇನೆ ಎನ್ನುತ್ತಾರೆ. ನಿಪಿ. 5 ರಲ್ಲಿ ಶರಾ ಇರುವುದಿಲ್ಲ. ಒಬ್ಬ ಅಂಚೆ ನೌಕರ Intimation delivered ಎಂದು ಬರೆಯಬೇಕು ಅದನ್ನು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 5 ರ ಪ್ರಕಾರ Intimation delivered ಅಂತ ಇಲ್ಲ ಎಂದರೆ ಸರಿಯಲ್ಲ. ನಿಪಿ. 5 ರ ವಿಳಾಸದ ಮೇಲೆ ಕಾಟ್ ಹೊಡೆದಾಗ ಸಹಿ ಮಾಡಬೇಕಾಗುತ್ತದೆ ಎಂದರೆ ನಿಪಿ. 5 ರಲ್ಲಿ ನಾನು ಚೋಟಾ ಸಹಿ ಮಾಡಿದ್ದೇನೆ ಎನ್ನುತ್ತಾರೆ. ಅದರಲ್ಲಿರುವ ಚೋಟಾ ಸಹಿ ನನ್ನದೆ ಎಂದು ತೋರಿಸಲು ಬಿ.ಓ ಜನರಲ್ ರಿಜಿಸ್ಟರ್ ನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ. 5 ರಲ್ಲಿ ಸದರಿ ಸಹಿ

ಇಲ್ಲ ಎಂದರೆ ಸಣ್ಣದಾಗಿ ಸಹಿ ಹಾಕಿದ್ದೆ ಎಂದು ನುಡಿಯುತ್ತಾರೆ. ನಾನು ನಿಪಿ. 5 ರಲ್ಲಿ ತೋರಿಸಿದ ವಿಳಾಸಕ್ಕೆ ಹೋಗಿಲ್ಲ, ಅಲ್ಲಿ ಯಾವುದೆ ಅಂಚೆ ಡೆಲವರಿ ಮಾಡಿಲ್ಲ ಎಂದರೆ ಸರಿಯಲ್ಲ. ಬಿ.ಓ ರಿಜಿಸ್ಟರ್ ನಲ್ಲಿ ನನ್ನ ಸದರಿ ವಿಳಾಸಕ್ಕೆ ಹೋದ ಬಗ್ಗೆ ನನ್ನ ಹೆಸರು ಇದೆ. ವಿಳಾಸಕ್ಕೆ ಹೋಗದೆ ನಾನು ಅಂಚೆ ಇಲಾಖೆಯಲ್ಲಿ ಕುಳಿತು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.